## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ**284/2017** ಸಿ.ಡಬ್ಲ್ಯೂ –22 ಪಿ.ಡಬ್ಲೂ-೫

| | | |
|---|---|---|
| ಹೆಸರು | ಃ | ಕುಮಾರಿ ಪದ್ಮಜಾ |
| ತಂದೆ/ಗಂಡ | ಃ | ಪ್ರಭಾಕರ ಡೋಬಳೇ |
| ವ ಯಸ್ಸು | ಃ | ೧೨ ವರ್ಷ |
| ಉದ್ಯೋಗ | : | ವಿದ್ಯಾರ್ಥಿನಿ |
| ವಾಸಸ್ಥಳ | ಃ | ಕನಗರ, ಉಸ್ಮಾನಾಬಾದ |

ದಿನಾಂಕಃ೨೭.೧೨.೨೦೧೮

ಸತ್ಯ ಪ್ರತಿಜ್ಞೆಯ ಮೇರೆಗೆ

---

ಸದರಿ ಸಾಕ್ಷಿಯು ಅಲ್ಪವಯಿಯಾಗಿದ್ದರಿಂದ ಅವಳ ಮಾನಸಿಕ ಪ್ರಬುದ್ದತೆ ತಿಳಿಗೊಳ್ಳಲು ಆಕೆಗೆ ಕೆಲವು ಪ್ರಶ್ನೆಗಳನ್ನು ಕೇಳಲಾಗಿ ಆಕೆ ಈ ಕೆಳಗಿನಂತೆ ಉತ್ತರಿಸಿರುತ್ತಾಳೆ.

ನನ್ನ ಹೆಸರು ಪದ್ಮಜಾ, ನಾನು ನ್ಯಾಯಾಲಯಕ್ಕೆ ಸಾಕ್ಷಿ ನುಡಿಯಲು ಬಂದಿದ್ದೇನೆ. ನಾನು 7 ನೇ ತರಗತಿಯಲ್ಲಿ ಓದುತ್ತಿದ್ದೇನೆ, ನಾನು ಹಿಂದಿನ ತರಗತಿಯಲ್ಲಿ ಪಡೆದ ಅಂಕಗಳು ಕೇಳಿದಾಗ ನನಗೆ ಅಂಕಗಳು ಗೊತ್ತಿಲ್ಲ, ಆದರೆ "ಎ" ಗ್ರೇಡ್ ಪಡೆದಿದ್ದೇನೆ ಎಂದು ಹೇಳಿದ್ದು ಸಾಕ್ಷಿಯು ಸಾಕ್ಷ್ಯ ನುಡಿಯಲು ಪ್ರಬುದ್ದಳು ಎಂದು ಕಂಡು ಬಂದಿದ್ದರಿಂದ ಆಕೆಯನ್ನು ಸಾಕ್ಷ ನುಡಿಯಲು ಅನುಮತಿಸಲಾಯಿತು.

### ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ

ಚಾಸಾ-1 ನನ್ನ ತಂದೆ, ಚಾಸಾ- 17, 19, 20, 21, 27, 28 ರವರ ಪರಿಚಯ ಇರುತ್ತದೆ. ಈ ಪ್ರಕರಣದಲ್ಲಿನ ಮೃತ 9 ಜನರ ಪರಿಚಯ ಇರುತ್ತದೆ. ಆರೋಪಿ ನನಗೆ ಗೊತ್ತು.

ನಾವು ದಿನಾಂಕ: 19.07.2016 ರಂದು ದೇವರ ದರ್ಶನಕ್ಕಾಗಿ ಕನಗರ ದಿಂದ ಗಾಣಗಾಪೂರಕ್ಕೆ ಹೋಗುತ್ತಿದ್ದೆವು. ನಾವು ಕ್ರೂಜರನಲ್ಲಿ ಹೋಗುತ್ತಿದ್ದೆವು, ಎಂ.ಹೆಚ್.12-7368 ಎಂಬ ಲಾರಿಯು ವೇಗವಾಗಿ ಅಡ್ಡಾದಿಡ್ಡಿಯಾಗಿ ಬಂದು ನಮಗೆ ಡಿಕ್ಕಿಪಡಿಸಿರುತ್ತದೆ. ಲಾರಿಯ ಚಾಲಕನ ತಪ್ಪಿನಿಂದ ಸದರಿ ಅಪಘಾತವಾಗಿದೆ. ಸದರಿ ಲಾರಿಯನ್ನು ಯಾರು ಚಲಾಯಿಸುತ್ತಿದ್ದರು ನನಗೆ ಗೊತ್ತಿಲ್ಲ. ಆದರೆ ಲಾರಿಯ ಚಾಲಕನ ತಪ್ಪಿನಿಂದ ಸದರಿ ಅಪಘಾತವಾಗಿದೆ. ಸದರಿ ಅಪಘಾತದಲ್ಲಿ ನನಗೆ ಕಾಲಿಗೆ ಗಾಯವಾಗಿರುತ್ತದೆ. ಅಪಘಾತದ ನಂತರ ನಾನು ಮೂರ್ಛೆ ಹೋಗಿರುತ್ತೇನೆ. ಯಾವ ಆಸ್ಪತ್ರೆಯಲ್ಲಿ ನನಗೆ ದಾಖಲಿಸಿದ್ದರು ನನಗೆ ಗೊತ್ತಿಲ್ಲ. ಸದರಿ ಘಟನೆಯಲ್ಲಿ ಎಷ್ಟು ಜನ ತೀರಿಕೊಂಡರು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**<u>ಪಾಟೀ ಸವಾಲು ಸ.ಸ.ಅ ರವರಿಂದ:</u>**

ಮೃತ ವರ್ಷಾ ಡೋಬಳೇ ನನ್ನ ತಾಯಿ. ಈ ಅಪಘಾತದಲ್ಲಿ ನನ್ನ ತಾಯಿ ಮೃತಪಟ್ಟಿರುತ್ತಾಳೆ. ನನ್ನ ತಮ್ಮ ಸ್ವಪ್ನಿಲ್ ಡೋಬಳೆ, ಸಂಜಯ ಇಂಗಳೇ, ಸರಜಾಬಾಯಿ, ಕಾಂತಾಬಾಯಿ, ಗಜಾಬಾಯಿ, ಕೃಷ್ಣಾ, ಫುಲಚಂದ ಇವರು ಸದರಿ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ. ಅಪಘಾತ ಪಡಿಸಿದ ಲಾರಿಯ ಸಂಖ್ಯೆ ಎಂ.ಹೆಚ್.-12- ಎಲ್.ಟಿ.-7368 ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ ಆರ್.ಜೆ.ಪಿ. ವಕೀಲರಿಂದ</u>**

ಎರಡು-ಮೂರು ದಿವಸಗಳ ನಂತರ ನನಗೆ ಪ್ರಜ್ಞೆ ಬಂದಿತು. ನಾನು ಕ್ರೂಜರನಲ್ಲಿ ಹಿಂದುಗಡೆ ಕುಳಿತುಕೊಂಡಿದ್ದೆ, ಎದುರುಗಡೆಯ ರಸ್ತೆ ಕಾಣುತ್ತಿರಲಿಲ್ಲ. ಎದುರುಗಡೆ ಬರುವ ಗಾಡಿ ಸಹ ನನಗೆ ಕಾಣುತ್ತಿರಲಿಲ್ಲ. ಎದುರುಗಡೆಯ ಲಾರಿ ತನ್ನ ಎಡಬದಿಯಲ್ಲಿ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ, ನಾನು ಮಲಗಿಕೊಂಡಿದ್ದೆ. ಎದುರುಗಡೆಯ ಲಾರಿಯ ಚಾಲಕನ ತಪ್ಪು ಇಲ್ಲ ಎಂದರೆ ಸರಿ ಅಲ್ಲ. ಅಲ್ಲಿನ ರಸ್ತೆಯು ಎಲ್ ಆಕಾರದಲ್ಲಿ ತಿರುವು ಇದೆ ಎಂದರೆ ಸರಿ. ಎಲ್ ಆಕಾರದಲ್ಲಿ ತಿರುವು ಪಡೆಯುವಾಗ ಎಲ್ಲಾ ವಾಹನಗಳು ನಿಧಾನವಾಗಿ ಬರುತ್ತವೆ ಎಂಧರೆ ಸರಿ. ನಮ್ಮ ವಾಹನದಲ್ಲಿ ಬಹಳ ಜನ ಇದ್ದರಿಂದ ವಾಹನದ ಆಯ ತಪ್ಪಿ ನಮ್ಮ ವಾಹನದ ಚಾಲಕ ಎದುರುಗಡೆ ವಾಹನಕ್ಕೆ ಡಿಕ್ಕಿ ಪಡಿಸಿರುತ್ತಾನೆ ಎಂಧರೆ ಸರಿ ಅಲ್ಲ. ಲಾರಿ ಚಾಲಕನ ಯಾವುದೇ ತಪ್ಪು ಇಲ್ಲ ಎಂಧರೆ ಸರಿ ಅಲ್ಲ. ಲಾರಿ ನಿಧಾನವಾಗಿ ಚಲಿಸುತ್ತಿತ್ತು ಎಂಧರೆ ಸರಿ ಅಲ್ಲ. ಪರಿಹಾರಕ್ಕಾಗಿ ನಾವು ಉಸ್ಮಾನಾಬಾದ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ.

(ಸಾಕ್ಷಿಯು ಹಿಂದಿಯಲ್ಲಿ ತನ್ನ ಸಾಕ್ಷ್ಯ ನುಡಿದಿರುವುದರಿಂದ, ಉಭಯ ವಕೀಲರಿಗೂ ಸಹ ಹಿಂದಿ ಭಾಷೆ ಅರ್ಥವಾಗುವುದರಿಂದ ಮತ್ತು ನ್ಯಾಯಾಧೀಶರಿಗೂ ಸಹ ಹಿಂದಿ ಭಾಷೆ ಅರ್ಥವಾಗುವುದರಿಂದ ಅವರ ಸಾಕ್ಷ್ಯವನ್ನು ಕನ್ನಡದಲ್ಲಿ ಬರೆದುಕೊಳ್ಳಲಾಯಿತು).
ಮರುವಿಚಾರಣೆ: ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ,ಆಳಂದ